# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಆಶ್ರಯ ಗ್ರಾಮೀಣ ನಿವೇಶನಗಳ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ.

***

<u>ಓದಲಾಗಿದೆ</u>: ಸರ್ಕಾರದ ಪತ್ರ ಸಂ. ವಇ 57 ಹೆಚ್‌ಎಎಸ್ 2007 ದಿನಾಂಕ 4.08.2007.

<u>ಪ್ರಸ್ತಾವನೆ</u>:

ರಾಜ್ಯ ಸರ್ಕಾರವು ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿನ ಜನರಿಗೆ ವಸತಿ ಸೌಲಭ್ಯ ಕಲ್ಪಿಸುವುದಕ್ಕಾಗಿ ನಿವೇಶನಗಳನ್ನು ಹಂಚಲು ಆಶ್ರಯ ಗ್ರಾಮೀಣ ನಿವೇಶನಗಳ ಯೋಜನೆಯನ್ನು ಹಮ್ಮಿಕೊಂಡಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಭೂಮಿಯು ಅಲ್ಪ ಪ್ರಮಾಣದಲ್ಲಿಯೂ ಲಭ್ಯವಾಗುತ್ತಿಲ್ಲವಾದ್ದರಿಂದ ಮತ್ತು ಜಮೀನಿನ ದರದಲ್ಲಿ ವಿಪರೀತ ಹೆಚ್ಚಳದಿಂದಾಗಿ ಭಾರಿ ಬೆಲೆಯಲ್ಲಿ ಖಾಸಗಿ ಜಮೀನು ಖರೀದಿಸಲು ಸಾಧ್ಯವಾಗದೇ ಸರ್ಕಾರವು ನಿವೇಶನಗಳ ಹಂಚಿಕೆಗಾಗಿ ನಿಗದಿಪಡಿಸಿದ ಗುರಿಯನ್ನು ಸಾಧಿಸಲಾಗುತ್ತಿಲ್ಲ. ಆದುದರಿಂದ, ಜಿಲ್ಲಾಧಿಕಾರಿಗಳು ಜಮೀನಿನ ಕನಿಷ್ಠ ಮಾರ್ಗಸೂಚಿ ಬೆಲೆಯ ಆಧಾರದ ಮೇಲೆ ಗರಿಷ್ಠ ಮೂರು ಪಟ್ಟು ಹೆಚ್ಚಿನ ಮಿತಿಯವರೆಗೆ ಜಮೀನು ಖರೀದಿಸಲು ಅನುಮತಿಸಿ, ಅವಶ್ಯವಿರುವ ಹೆಚ್ಚಿನ ಮೊತ್ತ ಬಿಡುಗಡೆ ಮಾಡುತ್ತ ಫಲಾನುಭವಿಗಳ ವಂತಿಗೆಯೊಂದಿಗೆ ಆಶ್ರಯ ಗ್ರಾಮೀಣ ನಿವೇಶನಗಳ ಯೋಜನೆಯನ್ನು ಜಾರಿಗೆ ತರಲು ಪ್ರಸ್ತಾಪಿಸಲಾಗಿದೆ.

2003ರ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ ಒಟ್ಟು 10,42,986 ಗ್ರಾಮೀಣ ನಿವೇಶನರಹಿತರಿದ್ದು, ಈವರೆಗೂ ಕೇವಲ 24,304 ನಿವೇಶನಗಳನ್ನು ಹಂಚಲಾಗಿದೆ. ಇನ್ನೂ 10,18,682 ನಿವೇಶನಗಳನ್ನು ಹಂಚಬೇಕಾಗಿದೆ. ಆದುದರಿಂದ ಈ ಯೋಜನೆಯಡಿ 2010-11ನೇ ಸಾಲಿನಲ್ಲಿ ಎರಡು ಲಕ್ಷ ನಿವೇಶನಗಳನ್ನು ಹಂಚಲು ಪ್ರಸ್ತಾಪಿಸಲಾಗಿದೆ. ಒಂದು ಎಕರೆ ಜಮೀನಿನಲ್ಲಿ 30' x 40' ವಿಸ್ತೀರ್ಣದ 20 ನಿವೇಶನಗಳಂತೆ, ಸರಾಸರಿ 3.00 ಲಕ್ಷ ರೂ.ಗಳ ದರದಲ್ಲಿ 10,000 ಎಕರೆ ಜಮೀನನ್ನು ಖರೀದಿಸಲು ಯೋಜಿಸಲಾಗಿದೆ. ಕೇಂದ್ರ ಸರ್ಕಾರದ 100.00 ಕೋಟಿ ರೂ.ಗಳು, ಹಾಗೂ ರಾಜ್ಯ ಸರ್ಕಾರದ 160.00 ಕೋಟಿ ರೂ.ಗಳ ಸಹಾಯಧನದೊಂದಿಗೆ ಮತ್ತು 40.00 ಕೋಟಿ ರೂ.ಗಳ ಫಲಾನುಭವಿಗಳ ವಂತಿಗೆಯಿಂದ ಈ ಮೊತ್ತವನ್ನು ಭರಿಸಲು ಉದ್ದೇಶಿಸಲಾಗಿದ್ದು, ಅದನ್ನು ಈ ಕೆಳಗಿನ ಆದೇಶದಲ್ಲಿ ಪ್ರಸ್ತಾಪಿಸಲಾಗಿದೆ.

## <u>ಆದೇಶ ಸಂ. ವಇ 65 ಹೆಚ್‌ಎಎಸ್ 2009 (ಭಾ), ಬೆಂಗಳೂರು, ದಿನಾಂಕ 12ನೇ ಏಪ್ರಿಲ್ 2010</u>

ಈ ಕಾರ್ಯಕ್ರಮದಡಿಯಲ್ಲಿ ಮಾರ್ಗಸೂಚಿ ದರದ ಮೂರು ಪಟ್ಟು ದರದವರೆಗೆ ಜಮೀನು ಖರೀದಿಸಲು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಈ ಕೆಳಗಿನಂತೆ ಅಧಿಕಾರಯುತ ಸಮಿತಿಯನ್ನು ರಚಿಸಲಾಗಿದೆ:

| | | |
|---|---|---|
| ಜಿಲ್ಲಾಧಿಕಾರಿಗಳು | .. | ಅಧ್ಯಕ್ಷರು |
| ಸ್ಥಳೀಯ ಶಾಸಕರು | .. | ಸದಸ್ಯರು |
| ಉಪ ವಿಭಾಗಾಧಿಕಾರಿಗಳು | .. | ಸದಸ್ಯರು |
| ತಹಸೀಲ್ದಾರರು | .. | ಸದಸ್ಯರು |
| ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ | | ಸದಸ್ಯ ಕಾರ್ಯದರ್ಶಿ |

17-4-10

12-4-10

ಒಂದು ವೇಳೆ ಮಾರ್ಗಸೂಚಿ ದರದ ಮೂರು ಪಟ್ಟು ದರಕ್ಕಿಂತಲೂ ಹೆಚ್ಚಿನ ದರ ಪಾವತಿಸಬೇಕಾದಲ್ಲಿ ಸರ್ಕಾರದ ಮಟ್ಟದಲ್ಲಿ ಪ್ರಕರಣವಾರು ಅನುಮೋದನೆ ಪಡೆಯತಕ್ಕದ್ದು.

2. ಪ್ರಸ್ತುತ 2010-11ನೇ ಸಾಲಿನಲ್ಲಿ ಎರಡು ಲಕ್ಷ ಫಲಾನುಭವಿಗಳಿಗೆ 30' x 40' ವಿಸ್ತೀರ್ಣದ ನಿವೇಶನ ಹಂಚಲು, ಪ್ರತಿ ಎಕರೆಗೆ ಗರಿಷ್ಠ 3.00 ಲಕ್ಷ ರೂ.ಗಳ ದರದಲ್ಲಿ 10,000 ಎಕರೆ ಜಮೀನು ಖರೀದಿ ಪ್ರಕ್ರಿಯೆ ಪ್ರಾರಂಭಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

3. ಮೇಲ್ಕಾಣಿಸಿದಂತೆಯೂ ಜಮೀನು ಖರೀದಿ ಸಾಧ್ಯವಾಗದಿದ್ದ ಪಕ್ಷದಲ್ಲಿ, ಮನೆ ನಿವೇಶನಗಳ ಹಂಚಿಕೆಗಾಗಿ The Karnataka Acquisition of Land for Grant of House Sites Act, 1972 (Karnataka Act 18 of 1973) ಮತ್ತು ಅದಕ್ಕೆ ಸಂಬಂಧಿಸಿದ ನಿಯಮಾವಳಿಗಳಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ವಸತಿ ಯೋಗ್ಯವಾದ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಭೂಮಾಲಿಕರೊಂದಿಗೆ ಚರ್ಚಿಸಿ, ಅವರುಗಳ ಸಮ್ಮತಿ ಪಡೆದು (consent award) ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳುವುದು ಅಥವಾ ಸಂದರ್ಭಾನುಸಾರ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸುವುದು.

4. ಜಮೀನು ಖರೀದಿಗಾಗಿ ಅವಶ್ಯವಿರುವ ಮೊತ್ತವನ್ನು ಈ ಕೆಳಗಿನಂತೆ ಕೇಂದ್ರ ಸರ್ಕಾರದ 100.00 ಕೋಟಿ ರೂ.ಗಳ ಸಹಾಯಧನದೊಂದಿಗೆ, 160.00 ಕೋಟಿ ರೂ.ಗಳ ರಾಜ್ಯ ಸರ್ಕಾರದ ಸಹಾಯಧನದೊಂದಿಗೆ ಮತ್ತು 40.00 ಕೋಟಿ ರೂ.ಗಳ ಫಲಾನುಭವಿಗಳ ವಂತಿಗೆಯಿಂದ ಭರಿಸಬಹುದಾಗಿದೆ.

(ಕೋಟಿ ರೂ.ಗಳಲ್ಲಿ)

| ಆರ್ಥಿಕ ವರ್ಷ | ನಿಗದಿ ಪಡಿಸಿದ ಗುರಿ | ರಾಜ್ಯ ಸರ್ಕಾರದ ಪಾಲು | ಕೇಂದ್ರ ಸರ್ಕಾರದ ಪಾಲು | ಫಲಾನುಭವಿಗಳ ವಂತಿಗೆ | ಒಟ್ಟು |
|---|---|---|---|---|---|
| 2010-11 | 2,00,000 | 160.00 | 100.00 | 40.00 | 300.00 |

5. ಮುಂದುವರಿದು, ಮೇಲೆ ಹೇಳಿದಂತೆ ಎಲ್ಲಾ ಪ್ರಕರಣಗಳಲ್ಲಿಯೂ, ಎಕರೆಗೆ ಗರಿಷ್ಠ ರೂ.3.00 ಲಕ್ಷಗಳ ದರವನ್ನು ಸಾಮಾನ್ಯವಾಗಿ ನಿಗಧಿಪಡಿಸದೆ, ಸ್ಥಳೀಯ ಸ್ಥಿತಿಗತಿಗೆ ಅನುಗುಣವಾಗಿ, ತಮ್ಮ ವಿವೇಚನೆಯಲ್ಲಿ, ಪ್ರತಿ ಪ್ರಕರಣದಲ್ಲಿನ ದರವನ್ನು ಪರಿಗಣಿಸಿ, ನಿರ್ಧರಿಸುವಂತೆಯೂ ಸಹ, ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

12.4.2010
(ಎಸ್. ಚಂದ್ರಶೇಖರಪ್ಪ)
ಸರ್ಕಾರದ ಉಪ ಕಾರ್ಯದರ್ಶಿ, ವಸತಿ ಇಲಾಖೆ.

1. ಮಹಾಲೇಖಪಾಲರು (ಎ ಮತ್ತು ಇ)(ಆಡಿಟ್ 1 ಮತ್ತು 2), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಎಲ್ಲಾ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು.
4. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
6. ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7. ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರ ಆಪ್ತ ಕಾರ್ಯದರ್ಶಿ
8. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ 3 ಮತ್ತು 9), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
9. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಸತಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.